uploaded

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಅಡಿಯಲ್ಲಿ "ಸಮಗ್ರ ಕೃಷಿ ಪದ್ಧತಿ ಸಮೂಹ"ಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ **"ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ" (SLCC & DLCC)** ರಚಿಸುವ ಕುರಿತು.

**ಓದಲಾಗಿದೆ:**
1) ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಇವರ ಏಕ ಕಡತ ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/ಎಫ್‌ಎಲ್‌ಹೆಚ್/ಐಎಫ್‌ಸಿ/ಸಭೆ-01/2021-22
2) ಎಂಒಆರ್‌ಡಿ ರವರ ಪತ್ರ ಸಂ: J-11060/19/2019RL/363174, ದಿನಾಂಕ: 02-03-2021

*****

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪ್ರಮುಖ ಕಾರ್ಯಕ್ರಮಗಳಲ್ಲೊಂದಾದ ದೀನ್ ದಯಾಳ ಅಂತ್ಯೋದಯ ಯೋಜನೆ - ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಡೇ-ಎನ್‌ಆರ್‌ಎಲ್‌ಎಂ) ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ (ಕೆ.ಎಸ್ ಆರ್.ಎಲ್.ಪಿ.ಎಸ್) ಇಲಾಖೆಗೆ ಒಳಪಡುವ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪಿನ ಸಣ್ಣ ಮತ್ತು ಅತೀ ಸಣ್ಣ ರೈತರ ಭೂ ರಹಿತ ಹಾಗೂ ಇನ್ನಿತರ ದುರ್ಬಲ ವರ್ಗದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ಸಾಮರ್ಥ್ಯಗಳ ಸುಧಾರಣೆಯೊಂದಿಗೆ ಅವರುಗಳ ಸಾಮೂಹಿಕ ಸಂಸ್ಥೆಗಳನ್ನು ರಚಿಸಿ, ಅಸ್ತಿತ್ವದಲ್ಲಿರುವ ವಿವಿಧ ಜೀವನೋಪಾಯಗಳನ್ನು ಉತ್ತೇಜಿಸುವುದು ಹಾಗೂ ಕೃಷಿ, ಕೃಷಿಯೇತರ ಮತ್ತು ಸೇವಾ ವಲಯಗಳಡಿ ಹೊಸ ಆರ್ಥಿಕ ಅವಕಾಶಗಳನ್ನು ಸೃಜಿಸುವ ಕಡೆಗೆ ಗಮನ ಹರಿಸಲಾಗಿದೆ.

ಡೇ-ಎನ್‌ಆರ್‌ಎಲ್‌ಎಂ ವಿಧೇಯಕ ಕುಟುಂಬಗಳ ಸದಸ್ಯರುಗಳಿಗೆ ಅಗತ್ಯ ತರಬೇತಿ ನೀಡುವುದರ ಮೂಲಕ ಅವರುಗಳ ಸಾಮರ್ಥ್ಯ ಬಲವರ್ಧನೆ-ಗೊಳಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ಬಡ ಕುಟುಂಬಗಳು 3-4 ಜೀವನೋಪಾಯ ಚಟುವಟಿಕೆಗಳನ್ನು ಅಳವಡಿಸಿಕೊಂಡು ದುಪ್ಪಟ್ಟು ಆದಾಯ ಗಳಿಸುವಂತೆ ಮಾಡುವ 'ಸಮಗ್ರ ಕೃಷಿ ಪದ್ಧತಿ ಸಮೂಹ' ಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ, ಎನ್.ಆರ್.ಇ.ಟಿ.ಪಿ ಯೋಜನಾ ಜಿಲ್ಲೆಗಳಾದ ಗದಗ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಆಯ್ದ 3 ತಾಲ್ಲೂಕಗಳಲ್ಲಿ ಯೋಜನೆ ಅನುಷ್ಠಾನ ಮಾಡಲು ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ.

ಮೇಲೆ ಓದಲಾದ(2) ರನ್ವಯ "ಸಮಗ್ರ ಕೃಷಿ ಪದ್ಧತಿ ಸಮೂಹ" ಕಾರ್ಯಕ್ರಮ ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಸರ್ಕಾರದ ಇತರ ಸಹ ಇಲಾಖೆಗಳ ವಿವಿಧ ಯೋಜನೆಗಳನ್ನು ಒಗ್ಗೂಡಿಸಲು ಅನುಕೂಲವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ "ಸಮನ್ವಯ ಸಮಿತಿ" ರಚಿಸಿ ಅಗತ್ಯ ಸಲಹೆ, ಸೂಚನೆ, ಪ್ರಗತಿ ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡುವ ಅವಶ್ಯಕತೆಯಿದ್ದು, ಒಗ್ಗೂಡಿಸುವಿಕೆ ಅನುಕೂಲವಾಗುವಂತೆ "ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ" ಯನ್ನು ರಚಿಸಿ ಆದೇಶಿಸುವಂತೆ ಕೋರಿ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಇವರು ಏಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 34 ಉಜೀಇ 2022 ಬೆಂಗಳೂರು, ದಿನಾಂಕ: 18.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದೀನ್‌ದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಡೇ-ಎನ್.ಆರ್.ಎಲ್.ಎಮ್.) ರಡಿ ಸಮಗ್ರ ಕೃಷಿ ಪದ್ಧತಿ

...2/-

ಸಮೂಹಗಳನ್ನು ಪರಿಣಾಕಾರಿಯಾಗಿ ಅನುಷ್ಠಾನ ಮಾಡಲು ಆಗಿಂದಾಗ್ಗೆ ಸಭೆ ಕರೆದು ಪ್ರತಿ ಪರಿಶೀಲನೆ ಕೈಗೊಂಡು, ಅಗತ್ಯ ಸಲಹೆ, ಸೂಚನೆ ನೀಡಲು ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು ಕೆಳಕಂಡಂತೆ ರಚಿಸಿ, ಜವಾಬ್ದಾರಿಗಳನ್ನು ನಿಗಧಿಪಡಿಸಿ ಆದೇಶಿಸಿದೆ.

**1. ರಾಜ್ಯ ಮಟ್ಟದ ಸಮನ್ವಯ ಸಮಿತಿ (ಎಸ್.ಎಲ್.ಸಿ.ಸಿ)**

| ಕ್ರ.ಸಂ | ಪದನಾಮ | ಇಲಾಖೆ | ಸ್ಥಾನ |
|---|---|---|---|
| 1 | ಅಭಿಯಾನ ನಿರ್ದೇಶಕರು | ಡೇ-ಎನ್ಆರ್ಎಲ್ಎಂ | ಅಧ್ಯಕ್ಷರು |
| 2 | ನಿರ್ದೇಶಕರು | ಕೃಷಿ ಇಲಾಖೆ | ಸದಸ್ಯರು |
| 3 | ನಿರ್ದೇಶಕರು | ತೋಟಗಾರಿಕೆ ಇಲಾಖೆ | ಸದಸ್ಯರು |
| 4 | ನಿರ್ದೇಶಕರು | ಪಶು ಸಂಗೋಪನಾ ಇಲಾಖೆ | ಸದಸ್ಯರು |
| 5 | ನಿರ್ದೇಶಕರು | ಮೀನುಗಾರಿಕೆ ಇಲಾಖೆ | ಸದಸ್ಯರು |
| 6 | ಮುಖ್ಯ ಕಾರ್ಯಾಚರಣೆ ಅಧಿಕಾರಿ | ಎಂ.ಜಿ.ಎನ್.ಆರ್.ಇ.ಜಿ.ಎ, | ಸದಸ್ಯರು |
| 7 | ವಿಸ್ತರಣಾ ನಿರ್ದೇಶಕರು | ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಧಾರವಾಡ | ಸದಸ್ಯರು |
| 8 | ವಿಸ್ತರಣಾ ನಿರ್ದೇಶಕರು | ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ, ಬೀದರ್ | ಸದಸ್ಯರು |
| 9 | ಯೋಜನಾ ಮುಖ್ಯಸ್ಥರು | ಸಮಗ್ರ ಕೃಷಿ ಪದ್ಧತಿಗಳು, ಎಐಸಿಆರ್‌ಪಿ, ಬೆಂಗಳೂರು ಮತ್ತು ಧಾರವಾಡ | ಸದಸ್ಯರು |
| 10 | ಅಪರ ಅಭಿಯಾನ ನಿರ್ದೇಶಕರು | ಡೇ-ಎನ್ಆರ್ಎಲ್ಎಂ, ಬೆಂಗಳೂರು. | ಸದಸ್ಯರು |
| 11 | ಉಪ ನಿರ್ದೇಶಕರು | ಡೇ-ಎನ್ಆರ್ಎಲ್ಎಂ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ |

**ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಕರ್ತವ್ಯಗಳು**

1. ಜಿಲ್ಲೆಗಳ ಆಯ್ಕೆ ಮತ್ತು ರಾಜ್ಯ ಸಮನ್ವಯ ಸಮಿತಿಗೆ ಶಿಫಾರಸ್ಸು ಮಾಡುವುದು.
2. ಜಿಲ್ಲಾ ಸಮನ್ವಯ ಸಮಿತಿ ರಚಿಸುವುದು
3. ಯೋಜನಾ ಪ್ರಸ್ತಾವನೆಗಳ ಮೌಲ್ಯ ಮಾಪನ ಮತ್ತು ಶಿಫಾರಸ್ಸು ಮಾಡುವುದು.
4. ಅನುದಾನ ಬಿಡುಗಡೆ ಮಾಡುವುದು
5. ಪ್ರಗತಿ ಪರಿಶೀಲನೆ ಮತ್ತು ಉಸ್ತುವಾರಿ ಮಾಡುವುದು.
6. ರಾಷ್ಟ್ರ ಸಮನ್ವಯ ಸಮಿತಿಗೆ ವರದಿ ಮಾಡುವುದು.
7. ರಾಷ್ಟ್ರ ಸಮನ್ವಯ ಸಮಿತಿ ಸೂಚಿಸುವ ಯಾವುದೇ ಪಾತ್ರ ಮತ್ತು ಕರ್ತವ್ಯ ನಿರ್ವಹಿಸುವುದು.
8. ತ್ರೈಮಾಸಿಕ ಸಭೆ ನಡೆಸಿ, ಪ್ರಗತಿ ಪರಿಶೀಲನೆ ಮಾಡುವುದು ಮತ್ತು ಜಿಲ್ಲಾ ಸಮನ್ವಯ ಸಮಿತಿಗೆ ಅಗತ್ಯ ಮಾರ್ಗದರ್ಶನ ನೀಡುವುದು.

**2. ಜಿಲ್ಲಾ ಮಟ್ಟದ ಸಮನ್ವಯ ಸಮಿತಿ (ಡಿ.ಎಲ್.ಸಿ.ಸಿ)**

| ಕ್ರ.ಸಂ | ಪದನಾಮ | ಇಲಾಖೆ | ಸ್ಥಾನ |
|---|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಜಿಲ್ಲಾ ಪಂಚಾಯತ್ | ಅಧ್ಯಕ್ಷರು |
| 2 | ಜಂಟಿ ನಿರ್ದೇಶಕರು | ಕೃಷಿ ಇಲಾಖೆ | ಸದಸ್ಯರು |
| 3 | ಉಪ/ಜಂಟಿ ನಿರ್ದೇಶಕರು | ತೋಟಗಾರಿಕೆ ಇಲಾಖೆ | ಸದಸ್ಯರು |
| 4 | ಸಹಾಯಕ/ಉಪ ನಿರ್ದೇಶಕರು | ಪಶು ಸಂಗೋಪನೆ ಇಲಾಖೆ | ಸದಸ್ಯರು |
| 5 | ಸಹಾಯಕ/ಉಪ ನಿರ್ದೇಶಕರು | ಮೀನುಗಾರಿಕೆ ಇಲಾಖೆ | ಸದಸ್ಯರು |
| 6 | ಕಾರ್ಯಕ್ರಮ ಸಂಯೋಜಕರು | ಕೃಷಿ ವಿಜ್ಞಾನ ಕೇಂದ್ರ | ಸದಸ್ಯರು |
| 7 | ಉಪ ಕಾರ್ಯದರ್ಶಿ | ಎಂ.ಜಿ.ಎನ್.ಆರ್.ಇ.ಜಿ.ಎ, ಜಿಲ್ಲಾ ಪಂಚಾಯತ್ | ಸದಸ್ಯರು |
| 8 | ಉಪ/ಜಂಟಿ ನಿರ್ದೇಶಕರು | ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 9 | ಯೋಜನಾ ನಿರ್ದೇಶಕರು | ಡೇ-ಎನ್.ಆರ್.ಎಲ್.ಎಂ | ಸದಸ್ಯರು |

...3/-

## ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಕರ್ತವ್ಯಗಳು

1. ರಾಜ್ಯ ಸಮನ್ವಯ ಸಮಿತಿಯೊಂದಿಗೆ ನಿಕಟ ಸಮನ್ವಯದೊಂದಿಗೆ ಕರ್ತವ್ಯ ನಿರ್ವಹಿಸುವುದು.
2. ಸಮೂಹ ಮಟ್ಟದ ಪಾಲುದಾರರ ನಡುವೆ ಸಮನ್ವಯತೆಯನ್ನು ಬಲಪಡಿಸುವುದು.
3. ಪಾಲುದಾರರ ನಡುವೆ ಜಿಲ್ಲೆಯ ಅಭಿವೃದ್ಧಿಗಾಗಿ ಸಾಮಾನ್ಯ ದೃಷ್ಟಿಕೋವ ರೂಪಿಸುವುದು.
4. ಯೋಜನೆಯ ಅನುಷ್ಠಾನಕ್ಕಾಗಿ ತಾಲ್ಲೂಕು ಮತ್ತು ಗ್ರಾಮ ಸಮೂಹಗಳ ಆಯ್ಕೆ ಮಾಡುವುದು.
5. ಯೋಜನಾ ಪ್ರಸ್ತಾವನೆ ಸಿದ್ಧಪಡಿಸಲು/ ಅಭಿವೃದ್ಧಿಪಡಿಸಲು ತಾಲ್ಲೂಕು ತಂಡಕ್ಕೆ ಅಗತ್ಯ ಮಾರ್ಗದರ್ಶನ ನೀಡುವುದು.
6. ತಾಲ್ಲೂಕು ತಂಡ ಅಭಿವೃದ್ಧಿಪಡಿಸಿದ ಯೋಜನಾ ಪ್ರಸ್ತಾವನೆಯನ್ನು ಪರಿಶೀಲಿಸುವುದು ಮತ್ತು ರಾಜ್ಯ ಸಮನ್ವಯ ಸಮಿತಿಯ ಪರಿಗಣನೆಗೆ ಶಿಫಾರಸ್ಸು ಮಾಡುವುದು.
7. ಅನುಷ್ಠಾನ ಕಾರ್ಯತಂತ್ರ ಸಿದ್ಧಪಡಿಸಿ ಸರ್ಕಾರದ ಇತರ ಸಹ ಇಲಾಖೆ/ಏಜೆನ್ಸಿಗಳಡಿ ದೊರಕುವ ಸವಲತ್ತು/ಸೌಲಭ್ಯಗಳನ್ನು ಒಗ್ಗೂಡಿಸುವಿಕೆ ಮೂಲಕ ದೊರಕಿಸಿಕೊಡುವುದು.
8. ನಿಯಮಿತವಾಗಿ ಪ್ರಗತಿ ಪರಿಶೀಲನೆ ನಡೆಸುವುದು ಮತ್ತು ಅಗತ್ಯ ಬೆಂಬಲ ನೀಡುವುದು.
9. ರಾಜ್ಯ ಸಮನ್ವಯ ಸಮಿತಿಗೆ ವರದಿ ಮಾಡುವುದು.
10. ಪ್ರತಿ ತಿಂಗಳು ನಿಯಮಿತವಾಗಿ ಸಭೆ ನಡೆಸಿ ಪ್ರಮುಖ ಕ್ರಮವಹಿಸುವ ಅಂಶಗಳು ಮತ್ತು ಅಂಶಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ರಾಜ್ಯ ಮಟ್ಟದ ಸಮನ್ವಯ ಸಮಿತಿಗೆ ಸಲ್ಲಿಸುವುದು.
11. ರಾಜ್ಯ ಮಟ್ಟದ ಸಮನ್ವಯ ಸಮಿತಿ ಸೂಚಿಸುವ ಇತರೆ ಪಾತ್ರ ಮತ್ತು ಜವಾಬ್ದಾರಿ ನಿರ್ವಹಿಸುವುದು.
12. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ರಚಿಸಿರುವ "ಕೃಷಿ ಜೀವನೋಪಾಯ ಕಾರ್ಯಕ್ರಮ ಅನುಷ್ಠಾನ ಸಮಿತಿ" ಮೂಲಕವೂ ಸಹ ಸಮಗ್ರ ಕೃಷಿ ಪದ್ಧತಿ ಸಮೂಹಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಕರ್ತವ್ಯಗಳನ್ನು ಸೇರಿಸಿಕೊಂಡು ಕರ್ತವ್ಯ ನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

18/03/2022

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಇವರಿಗೆ:

1. ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್ಆರ್ಎಲ್‌ಪಿಎಸ್ ಬೆಂಗಳೂರು.
2. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
4. ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ (ಒಳನಾಡು) ಪೋಡಿಯಂ ಬ್ಲಾಕ್, 3ನೇ ಮಹಡಿ ವಿ.ವಿ ಗೋಪುರ ಬೆಂಗಳೂರು.
6. ಮುಖ್ಯ ಕಾರ್ಯಚರಣೆ ಅಧಿಕಾರಿಗಳು, ಎಂ ಜಿ ಎನ್ ಆರ್ ಇ ಜಿ ಎ, ಬೆಂಗಳೂರು.
7. ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು ಮತ್ತು ಧಾರವಾಡ.
8. ವಿಸ್ತರಣಾ ನಿರ್ದೇಶಕರು, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಿಗಳ ವಿಶ್ವ ವಿದ್ಯಾಲಯ, ಬೀದರ್.
9. ಯೋಜನಾ ಮುಖ್ಯಸ್ಥರು, ಸಮಗ್ರ ಕೃಷಿ ಪದ್ಧತಿಗಳು, ಎ ಐ ಸಿ ಆರ್ ಪಿ, ಬೆಂಗಳೂರು ಮತ್ತು ಧಾರವಾಡ,
10. ಅಪರ ಅಭಿಯಾನ ನಿರ್ದೇಶಕರು, ಡೇ-ಎನ್ ಆರ್ ಎಲ್ ಎಂ ಬೆಂಗಳೂರು,
11. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.

(9) 19/3/22 12:46pm

12. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
13. ಉಪ/ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ,
14. ಸಹಾಯಕ/ಉಪ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ,
15. ಸಹಾಯಕ/ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ,
16. ಉಪ ಕಾರ್ಯದರ್ಶಿ ಎಂ.ಜಿ.ಎನ್.ಆರ್.ಇ.ಜಿ.ಎ, ಜಿಲ್ಲಾ ಪಂಚಾಯತ್,
17. ಉಪ/ಜಂಟಿ ನಿರ್ದೇ ಶಕರು, ಸಮಾಜ ಕಲ್ಯಾಣ ಇಲಾಖೆ,
18. ಯೋಜನಾ ನಿರ್ದೇಶಕರು, ಡೇ-ಎನ್ ಆರ್ ಎಲ್ ಎಂ ಬೆಂಗಳೂರು,

**ಪ್ರತಿಯನ್ನು:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
5. ಉಪ ಕುಲಪತಿ ಇವರ ಆಪ್ತ ಶಾಖೆ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಧಾರವಾಡ .
6. ಉಪ ಕುಲಪತಿ ಇವರ ಆಪ್ತ ಶಾಖೆ, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್.
7. ಆಯುಕ್ತರ ಆಪ್ತ ಶಾಖೆ, ಸಮಾಜ ಕಲ್ಯಾಣ ಇಲಾಖೆ , ಬೆಂಗಳೂರು.
8. ಕಛೇರಿ ಪ್ರತಿ